2017 ಕ.ತೀ.ವ. 1779

(ಧಾರವಾಡ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಹೆಚ್.ಜಿ. ರಮೇಶ್
ಮತ್ತು
ಸನ್ಮಾನ್ಯ ನ್ಯಾಯಮೂರ್ತಿ ಶ್ರೀಮತಿ ರತ್ನಕಲಾ

# ಕರ್ನಾಟಕ ರಾಜ್ಯ, ಸಾರಿಗೆ ಇಲಾಖೆ ಮತ್ತು ಇತರರು -ವಿರುದ್ಧ- ಮೆ॥ ಚಾಳುಕ್ಯ ಮೋಟಾರ್ಸ್ ಪ್ರೈವೇಟ್ ಲಿಮಿಟೆಡ್ *

ಕರ್ನಾಟಕ ಉಚ್ಚ ನ್ಯಾಯಾಲಯ ಅಧಿನಿಯಮ, 1961 ರ 4ನೇ ಪ್ರಕರಣದ ಮೇರೆಗಿನ ರಿಟ್ ಅಪೀಲುಗಳು.

ಮೋಟಾರು ವಾಹನ ಅಧಿನಿಯಮ, ಪ್ರಕರಣ 74(2)(xiii)

450 ಮಿ. ಮೀಟರ್‌ಗಿಂತ ಹೆಚ್ಚಿನ ಹಿಂಚಾಚನ್ನು ಹೊಂದಿರುವ ಹೊಸದಾಗಿ ನೋಂದಾಯಿತವಾದ ಮೂರು ಚಕ್ರಗಳ ಕರಾರು ವಾಹನಗಳ ಪರವಾನಗಿಯನ್ನು ಮಂಜೂರಾತಿ ಮಾಡುವುದನ್ನು ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು ನಿಷೇಧಿಸಿದ್ದನ್ನು ಕಾನೂನು ಬಾಹಿರವೆಂದು ಆದೇಶಿಸಿದ ಮಾನ್ಯ ಏಕಪೀಠ ನ್ಯಾಯಾಧೀಶರ ಆದೇಶವನ್ನು ಪ್ರಸ್ತುತ ಅಪೀಲುಗಳಲ್ಲಿ ಸರ್ಕಾರವು ಪ್ರಶ್ನಿಸಿದೆ.

ಅಧಿನಿಯಮದ ಅಡಿಯಲ್ಲಿ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದ ಯಾವುವೇ ಷರತ್ತುಗಳನ್ನು ಪರವಾನಿಗೆಗೆ ಅನ್ವಯಿಸುವುದಕ್ಕೆ ಪ್ರಾದೇಶಿಕ ಸಾರಿಗೆ ಪ್ರಾಧಿಕಾರಕ್ಕೆ ಅಧಿನಿಯಮದ 74(2)(xiii)ನೇ ಪ್ರಕರಣವು ಅಧಿಕಾರ ನೀಡುತ್ತದೆ.

* ರಿಟ್ ಅಪೀಲು ಸಂ. 100401/2015 ಮತ್ತು ರಿಟ್ ಅಪೀಲು ಸಂ.100532-100533/ 2015 (ಎಂ.ವಿ), ದಿನಾಂಕ: 6ನೇ ಜೂನ್, 2016.

**ಇದು, ಹೊಸದಾಗಿ ನೋಂದಾಯಿತವಾದ ಮೋಟಾರು ವಾಹನಗಳಿಗೆ ನೀಡುವ ಪರವಾನಿಗೆಯ ಮಂಜೂರಾತಿಯನ್ನು ನಿಷೇಧಿಸಲು ಪ್ರಾದೇಶಿಕ ಸಾರಿಗೆ ಪ್ರಾಧಿಕಾರಕ್ಕೆ ಅಧಿಕಾರ ನೀಡುವುದಿಲ್ಲ. ಮೋಟಾರು ವಾಹನಕ್ಕೆ ಕರಾರು ವಾಹನ ಒಪ್ಪಂದ 450 ಮಿ. ಮೀಟರ್ ಅನ್ನು ಮೀರಿದ ಹಿಂಚಾಚನ್ನು ಹೊಂದಿರುವ ಪರವಾನಗಿಯ ಮಂಜೂರಾತಿಯನ್ನು ನಿಷೇಧಿಸಲು ಪ್ರಾದೇಶಿಕ ಸಾರಿಗೆ ಪ್ರಾಧಿಕಾರಕ್ಕೆ ಅಧಿಕಾರ ನೀಡುವ ಅಧಿನಿಯಮದ ಅಡಿಯಲ್ಲಿನ ಯಾವುದೇ ನಿಯಮವನ್ನು ಉಲ್ಲೇಖಿಸಲು ಮಾನ್ಯ ಹೆಚ್ಚುವರಿ ಸರ್ಕಾರಿ ವಕೀಲರಿಗೆ ಸಾಧ್ಯವಾಗಿಲ್ಲ. ಹಾಗಾಗಿ, ಹೆಚ್ಚುವರಿ ಸರ್ಕಾರಿ ವಕೀಲರು ಅಧಿನಿಯಮದ 74(2)(xiii) ಪ್ರಕರಣವನ್ನು ಅವಲಂಬಿಸುವುದು ಯುಕ್ತವಾಗಿರುವುದಿಲ್ಲ. ಮಾನ್ಯ ಏಕಪೀಠ ನ್ಯಾಯಾಧೀಶರು ನೀಡಿದ ಆದೇಶದಲ್ಲಿ ಹಸ್ತಕ್ಷೇಪ ಮಾಡುವುದಕ್ಕೆ ಯಾವುದೇ ಕಾರಣಗಳು ಇರುವುದಿಲ್ಲ. ಅದಕ್ಕನುಸಾರವಾಗಿ ಈ ರಿಟ್ ಅಪೀಲುಗಳನ್ನು ವಜಾಮಾಡಲಾಗಿದೆ.**

**ಪ್ರಸ್ತುತ ಅಪೀಲನ್ನು ವಜಾಗೊಳಿಸಲಾಗಿದೆ.**

ಅಪೀಲುದಾರರ ಪರ : ಶ್ರೀಮತಿ ಕೆ. ವಿದ್ಯಾವತಿ, ಹೆಚ್ಚುವರಿ ಸರ್ಕಾರಿ ವಕೀಲರು;
ಪ್ರತ್ಯಪೀಲುದಾರರ ಪರ : ಶ್ರೀಮತಿ ವಿ. ವಿದ್ಯಾಐಯ್ಯರ್, ವಕೀಲರು.

## ತೀರ್ಪು

**ನ್ಯಾಯಮೂರ್ತಿ ಹೆಚ್.ಜಿ. ರಮೇಶ್ (ಮೌಖಿಕ):**

1. ರಾಜ್ಯವು, ಡಬ್ಲ್ಯೂ.ಪಿ.ಸಂ. 106507–106509/2014 ರಲ್ಲಿ ಈ ನ್ಯಾಯಾಲಯದ ಮಾನ್ಯ ಏಕಪೀಠ ನ್ಯಾಯಾಧೀಶರು, ದಿನಾಂಕ 12ನೇ ಡಿಸೆಂಬರ್, 2014 ರಂದು ಪ್ರಶ್ನಿತ ಆದೇಶದ ಮೂಲಕ ಗದಗ್ ಜಿಲ್ಲೆಯಲ್ಲಿ ಹೊಸದಾಗಿ ನೋಂದಣಿಯಾದ, 450 ಮಿ.ಮೀಗಿಂತ ಹೆಚ್ಚು ಹಿಂಚಾಚನ್ನು ಹೊಂದಿರುವ ಎಲ್ಲಾ ಮೂರು ಚಕ್ರದ ಕರಾರು ವಾಹನ ಪರವಾನಗಿಗಳ ಮಂಜೂರಾತಿಯನ್ನು ನಿಷೇಧಿಸುವ ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ದಿನಾಂಕ 13.09.2013ರ ನಿರ್ಣಯವು, ಅಂಥ

ನಿಷೇಧವನ್ನು ವಿಧಿಸುವ ಅಧಿಕಾರವನ್ನು ಕಾನೂನಿನ ಯಾವುದೇ ಉಪಬಂಧದಲ್ಲಿ ಪತ್ತೆ ಮಾಡಲು ಸಾಧ್ಯವಾಗದ ಕಾರಣ ಕಾನೂನುಬಾಹಿರವಾಗಿದೆ ಎಂದು ತೀರ್ಮಾನಿಸಿದ್ದಾರೆ.

**2**. ನಾವು, ಅಪೀಲುದಾರರ ಪರವಾಗಿ ಹಾಜರಾಗಿರುವ ಹೆಚ್ಚುವರಿ ಸರ್ಕಾರಿ ವಕೀಲರನ್ನು ಮೇಲೆ ಹೇಳಿದ ನಿಷೇದವನ್ನು ವಿಧಿಸುವುದಕ್ಕೆ ಪ್ರಾದೇಶಿಕ ಸಾರಿಗೆ ಪ್ರಾಧಿಕಾರಕ್ಕೆ ಇರುವ ಅಧಿಕಾರವನ್ನು ಕಾನೂನಿನ ಯಾವುದೇ ಉಪಬಂಧದಲ್ಲಿ ಪತ್ತೆ ಮಾಡಿಕೊಡುವುದಕ್ಕೆ ತಿಳಿಸಲಾಗಿದೆ. ಮಾನ್ಯ ಹೆಚ್ಚುವರಿ ಸರ್ಕಾರಿ ವಕೀಲರು (ಎಜಿಎ) ಮೋಟಾರು ವಾಹನಗಳ ಅಧಿನಿಯಮ, 1988ರ ('ಅಧಿನಿಯಮ') ದ 74ನೇ ಪ್ರಕರಣದ (2) ನೇ ಉಪಪ್ರಕರಣದ (xiii) ಖಂಡವನ್ನು ಉಲ್ಲೇಖಿಸಿರುವರು.

**3**. ಹೆಚ್ಚುವರಿ ಸರ್ಕಾರಿ ವಕೀಲರು ಉಲ್ಲೇಖಿಸಿರುವ ಉಪಬಂಧವನ್ನು ಮತ್ತು ಅಧಿನಿಯಮದ 2ನೇ ಪ್ರಕರಣದ (32)ನೇ ಖಂಡದಲ್ಲಿ 'ನಿಯಮಿಸಲಾದ' ಪರಿಭಾಷೆಯನ್ನು ಸಹ ನಾವು ಉದ್ಧೃತಗೊಳಿಸಿದ್ದೇವೆ. ಅದು ಕೆಳಗಿನಂತಿದೆ.

**ಪ್ರಕರಣ 74. ಕರಾರು ವಾಹನದ ಪರ್ಮಿಟ್ಟು ನೀಡಿಕೆ:-**

(1)*********

*(2) ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು, ಕರಾರು ವಾಹನದ ಪರ್ಮಿಟ್ಟನ್ನು ನೀಡಲು ನಿರ್ಧರಿಸಿದರೆ, ಅದು ಈ ಅಧಿನಿಯಮದ ಮೇರೆಗೆ ರಚಿಸಬಹುದಾದ ಯಾವುವೇ ನಿಯಮಗಳಿಗೊಳಪಟ್ಟು, ಆ ಪರ್ಮಿಟ್ಟಿಗೆ ಈ ಕೆಳಕಂಡ ಷರತ್ತುಗಳ ಪೈಕಿ ಯಾವುದೇ ಒಂದು ಅಥವಾ ಹೆಚ್ಚಿನ ಷರತ್ತುಗಳನ್ನು ಲಗತ್ತಿಸಬಹುದು, ಎಂದರೆ:-*

********

*(xiii)* ***ನಿಯಮಿಸಬಹುದಾದಂಥ*** *ಯಾವುವೇ ಇತರ ಷರತ್ತುಗಳು.*

***ಪ್ರಕರಣ 2. ಪರಿಭಾಷೆಗಳು:*** *– ****************

***(32) ''ನಿಯಮಿಸಲಾದುದು''*** *ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;*

*(ಒತ್ತು ನೀಡಲಾಗಿದೆ)*

4. ಅಧಿನಿಯಮದ ಅಡಿಯಲ್ಲಿ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದ ಯಾವುವೇ ಷರತ್ತುಗಳನ್ನು ಪರವಾನಿಗೆಗೆ ಅನ್ವಯಿಸುವುದಕ್ಕೆ ಪ್ರಾದೇಶಿಕ ಸಾರಿಗೆ ಪ್ರಾಧಿಕಾರಕ್ಕೆ ಅಧಿನಿಯಮದ 74 (2) (xiii)ನೇ ಪ್ರಕರಣವು ಅಧಿಕಾರ ನೀಡುತ್ತದೆ. ಇದು, ಹೊಸದಾಗಿ ನೋಂದಾಯಿತವಾದ ಮೋಟಾರು ವಾಹನಗಳಿಗೆ ನೀಡುವ ಪರವಾನಿಗೆಯ ಮಂಜೂರಾತಿಯನ್ನು ನಿಷೇಧಿಸಲು ಪ್ರಾದೇಶಿಕ ಸಾರಿಗೆ ಪ್ರಾಧಿಕಾರಕ್ಕೆ ಅಧಿಕಾರ ನೀಡುವುದಿಲ್ಲ. ಮೋಟಾರು ವಾಹನಕ್ಕೆ ಕರಾರು ವಾಹನ ಒಪ್ಪಂದ 450 ಮಿ. ಮೀಟರ್ ಅನ್ನು ಮೀರಿದ ಹಿಂಚಾಚನ್ನು ಹೊಂದಿರುವ ಪರವಾನಗಿಯ ಮಂಜೂರಾತಿಯನ್ನು ನಿಷೇಧಿಸಲು ಪ್ರಾದೇಶಿಕ ಸಾರಿಗೆ ಪ್ರಾಧಿಕಾರಕ್ಕೆ ಅಧಿಕಾರ ನೀಡುವ ಅಧಿನಿಯಮದ ಅಡಿಯಲ್ಲಿನ ಯಾವುದೇ ನಿಯಮವನ್ನು ಉಲ್ಲೇಖಿಸಲು ಮಾನ್ಯ ಹೆಚ್ಚುವರಿ ಸರ್ಕಾರಿ ವಕೀಲರಿಗೆ ಸಾಧ್ಯವಾಗಿಲ್ಲ. ಹಾಗಾಗಿ, ಹೆಚ್ಚುವರಿ ಸರ್ಕಾರಿ ವಕೀಲರು ಅಧಿನಿಯಮದ 74 (2) (xiii) ಪ್ರಕರಣವನ್ನು ಅವಲಂಬಿಸುವುದು ಯುಕ್ತವಾಗಿರುವುದಿಲ್ಲ. ಮಾನ್ಯ ಏಕಪೀಠ ನ್ಯಾಯಾಧೀಶರು ನೀಡಿದ ಆದೇಶದಲ್ಲಿ ಹಸ್ತಕ್ಷೇಪ ಮಾಡುವುದಕ್ಕೆ ಯಾವುದೇ ಕಾರಣಗಳು ಇರುವುದಿಲ್ಲ. ಅದಕ್ಕನುಸಾರವಾಗಿ ಈ ರಿಟ್ ಅಪೀಲುಗಳನ್ನು ವಜಾಮಾಡಲಾಗಿದೆ.

ಅಪೀಲುಗಳನ್ನು ವಜಾಗೊಳಿಸಲಾಗಿದೆ.

---